# ಕರ್ನಾಟಕ ವಿಧಾನ ಸಭೆ

**ಮಂಗಳವಾರ 27ನೇ ಮಾರ್ಚ್ 2007 ರಂದು**

**ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ**

**ಬೆಳಿಗ್ಗೆ 10 : 58 ಗಂಟೆಗೆ ಸಮಾವೇಶಗೊಂಡಿತು.**

**ಅಧ್ಯಕ್ಷರು ಶ್ರೀ ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.**

**(ಸದನದ ಕಲಾಪವು ಸಮಯ ಬೆಳಿಗ್ಗೆ 10 : 58 ಕ್ಕೆ ಪ್ರಾರಂಭವಾಯಿತು.**
**ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)**

**ಅಧ್ಯಕ್ಷರು** : ಮಾನ್ಯ ಹೆಗ್ಡೆಯವರೆ, ವರದಿಯನ್ನೊಪ್ಪಿಸಿ.

## 1. ವರದಿಯನ್ನೊಪ್ಪಿಸುವುದು

**ವಿಷಯ :– ಅಂದಾಜು ಸಮಿತಿಯ 3 ನೇ ವರದಿ.**

**ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** :– ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ 2006 –07 ನೇ ಸಾಲಿನ ಅಂದಾಜು ಸಮಿತಿಯ ಅಧ್ಯಕ್ಷನಾದ ನಾನು ಆರ್ಥಿಕ ಇಲಾಖೆಗೆ ಸಂಬಂಧಿಸಿದ 3 ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

**ಅಧ್ಯಕ್ಷರು** :– ವರದಿಯನ್ನೊಪ್ಪಿಸಲಾಯಿತು. ಈಗ ವಿತ್ತೀಯ ಕಾರ್ಯಕಲಾಪ. 2007– 08 ನೇ ಸಾಲಿನ ಆಯವ್ಯಯ ಅಂದಾಜುಗಳ ಕುರಿತು ಸಾಮಾನ್ಯ ಚರ್ಚೆ.

**ಶ್ರೀ ಎನ್. ಧರ್ಮಸಿಂಗ್** :– ಮಾನ್ಯ ಅಧ್ಯಕ್ಷರೇ, ಇವತ್ತು ಪ್ರಶ್ನೋತ್ತರ ನಂತರ Zero hour ಇಟ್ಟಿದ್ದೀರಿ.

**ಅಧ್ಯಕ್ಷರು** :– ಇಲ್ಲ ಪ್ರಶ್ನೋತ್ತರದ ಕೊನೆಯಲ್ಲಿ. . . .

**ಶ್ರೀ ಎನ್. ಧರ್ಮಸಿಂಗ್** :– ಅದು ಆದಮೇಲೆ ಇಟ್ಟಿದ್ದೀರಿ. ಆದರೆ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ನಿನ್ನೆ ಮತ್ತು ಇವತ್ತು ಘಟನೆ ಏನಾಗಿದೆ Zero hour ಪ್ರಾರಂಭದಲ್ಲಿ ಇದ್ದರೆ ಪ್ರಸ್ತಾಪ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು.